ತಿಂಗಳ ಮಟ್ಟಿಗೆ ಬಾಳಬಹುದು. ಜಪಾನಿನಂತೆಯೇ ಚೀನಾ, ಕೊರಿಯಾ, ತೈವಾನ್, ಅಮೆರಿಕದ ವಾಷಿಂಗ್ಟನ್‌ನಲ್ಲಿ ಕೂಡ ಈ ಹೂಹಬ್ಬ ನಡೆಯುತ್ತದೆ.

ಜಪಾನೀಯರ ಸಾಂಪ್ರದಾಯಿಕ ಉಡುಪಾದ ಕಿಮೋನೊ (kimono) ಧರಿಸುವುದು ಕೂಡ ನಮ್ಮ ಪ್ರವಾಸದ ಒಂದು ಭಾಗವಾಗಿತ್ತು. ನಾವೆಲ್ಲರೂ ಪಾರ್ಲರ್‌ಗೆ ಹೋಗಿ ಕಿಮೋನೊ ಧರಿಸಿದೆವು. ಕರ್ನಾಟಕದ ಸಾಂಪ್ರದಾಯಿಕ ಉಡುಗೆಗಳನ್ನೂ ಹೀಗೆ ಯಾಕೆ 'ಹೈಲೈಟ್' ಮಾಡಬಾರದು ಎಂಬ ಆಲೋಚನೆಯೂ ಬಂದುಹೋಯಿತು. ಪ್ರವಾಸಿಗರನ್ನು ಸೆಳೆಯಲು ಜಪಾನಿನಂತಹ ಚಿಕ್ಕ ದೇಶ ಅನುಸರಿಸುವ ಕ್ರಿಯಾಶೀಲ ಕ್ರಮಗಳನ್ನು ಕಾಣುತ್ತಿದ್ದರೆ, ಈ ವಿಷಯದಲ್ಲಿ ಭಾರತ ಏಕೆ ಹಿಂದುಳಿದಿದೆ ಎಂಬ ಪ್ರಶ್ನೆಯೂ ಮೂಡುತ್ತದೆ.



ಜಪಾನಿನ ಪುರಾತನ 'ನಾರಾ ಪಾರ್ಕ್'

ಜಪಾನ್ ಪ್ರವಾಸದ ಮತ್ತೂ ಒಂದು ಸುಂದರ ಅನುಭವ ಟೀ ಸೆರಮನಿಯದ್ದು. ಟೀ ತಯಾರಿಸುವುದರ ಜೊತೆಗೆ ಟೀ ಕುಡಿಯುವ ಕ್ರಮವನ್ನೂ ತೋರಿಸಿಕೊಟ್ಟರು. ಧ್ಯಾನ ಮಾಡಿದಂತೆ ಟೀ ಕುಡಿಯುತ್ತಿದ್ದರೆ, ನಮ್ಮ ಚಿಕ್ಕಮಗಳೂರಿನ ಕಾಫಿ ಪರಿಮಳವೂ ನೆನಪಿಗೆ ಬಂತು.

ನನ್ನ ಕುತೂಹಲವನ್ನು ಬಹಳ ಕೆರಳಿಸಿದ್ದು 'ಫ್ಯೂಜಿ ಮೌಂಟೇನ್'. ಜಪಾನ್ ಎಂದ ಕೂಡಲೇ ಫ್ಯೂಜಿ ಮೌಂಟೇನ್ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಅಲ್ಲಿನ ಜೀವಂತ ಜ್ವಾಲಾಮುಖಿಗಳನ್ನು ಕಂಡದ್ದು ಅದ್ಭುತ ಅನುಭವ. ನಾವು ಹಾಕೋನ್‌ನಿಂದ ಕೇಬಲ್ ಕಾರ್‌ಗಳಲ್ಲಿ ಕ್ರಮಿಸಿ, ಗನ್ ನರಾವಾ ಮಿನಾ ಮಿಟುಸಾವಾ ತಲುಪಿ ಪ್ರಕೃತಿ ವೈಭವದ ನಡುವೆ ಹೊಗೆಯುಗುಳುವ ಪರ್ವತಗಳನ್ನು ಕಂಡೆವು. ಸುತ್ತಲೂ ಸಲ್ಫರ್ ಹೊಗೆ ತುಂಬಿ ಕೆಟ್ಟವಾಸನೆ ಹಬ್ಬಿತ್ತು. ಈ ಹೊಗೆ ಉಗುಳುವ ಪರ್ವತಗಳು ಯಾವಾಗ ಬೇಕಾದರೂ ಸ್ಫೋಟಗೊಳ್ಳಬಹುದೆಂದು ಜಪಾನಿಯನ್ನರು ಆ ಪರ್ವತಗಳನ್ನು ಕೊರೆದು ಕೊಳವೆ ಜೋಡಿಸಿ ಆ ಬಿಸಿ ಹೊಗೆ ಹೊರಚೆಲ್ಲುವಂತೆ ಮಾಡಿದ್ದಾರೆ.

ಪದೇ ಪದೇ ಅಗ್ನಿ ಉಗುಳುವ ಪರ್ವತಗಳಿಂದ ಬೇಸತ್ತ ಜನರು, ಅಲ್ಲಿನ 'ಫ್ಯೂಜಿ' ಪರ್ವತವನ್ನು ಪ್ರಾರ್ಥಿಸಿದ್ದರು. ಪ್ರಸನ್ನಗೊಂಡ ಫ್ಯೂಜಿ ಪರ್ವತ, ಬೇರೆ ಪರ್ವತಗಳಿಂದ ಬೆಂಕಿ ಉಗುಳದಂತೆ ಜನರನ್ನು ರಕ್ಷಿಸಿದೆಯಂತೆ. ಇದು ನಮ್ಮ ಗೈಡ್ ಯೂಕಿ ಹೇಳಿದ ಕಥೆ.

'ತೇಲುವ ಪ್ರವೇಶ ದ್ವಾರ' (floating torri) ಇಲ್ಲಿಯ ಮತ್ತೊಂದು ವೈಶಿಷ್ಟ್ಯ. ನೀರಿನ ಮೇಲೆ ತೇಲುತ್ತಿರುವಂತೆ ಕಾಣುವ ಈ ಕಮಾನು ನೋಡಲು ಸುಂದರವಾಗಿದ್ದು, ಜಪಾನಿಗೆ ಬರುವ ಪ್ರವಾಸಿಗರು ಇದನ್ನು ನೋಡದೇ ಮರಳರು. ಇದರೊಂದಿಗೆ, ಸುಂದರ ಪ್ರಕೃತಿಯ ನಡುವೆ ಕ್ರೂಸಿನಲ್ಲಿ ಸಾಗಿದ್ದು ಆಹ್ಲಾದಕರ ಅನುಭವ ನೀಡಿತ್ತು. ಮಲೇಷ್ಯಾ, ಸಿಂಗಪುರ, ಥಾಯ್ಲೆಂಡ್ ಮುಂತಾದ ಪ್ರವಾಸಿಗರೇ ಕ್ರೂಸಿನಲ್ಲಿ ಹೆಚ್ಚಿದ್ದರು.

ಜಪಾನ್‌ಗೂ ಭಾರತಕ್ಕೂ ಒಂದು ಸಾಮ್ಯತೆ ನಮಗೆ ಕಂಡಿದ್ದು ಹನುಮನ ದೇಗುಲದಲ್ಲಿ. ಜಪಾನ್ ತಲುಪಿದ ದಿನವೇ ನಾವು ಟೋಕಿಯೊದಲ್ಲಿ ಮೊದಲು ಸುಕುಶಿಮಾ ದೇವಸ್ಥಾನಕ್ಕೆ ಭೇಟಿ ನೀಡಿದ್ದೆವು. ಈ ದೇವಸ್ಥಾನದ ಹೊರಗೆ ಬೃಹತ್ ಹನುಮನ ವಿಗ್ರಹವಿದೆ. ಇದು ಭಾರತವನ್ನು ನೆನಪಿಗೆ ತಂದಿತು.

ತುಸು ಚಳಿಯಲ್ಲಿ ಕ್ರೂಸ್ ಪ್ರಯಾಣ ಮುಗಿಸಿ ಹಿರೋಷಿಮಾಗೆ ಬಂದಿಳಿದೆವು. ಹಿರೋಷಿಮಾಗೆ ಬಂದು ಇಳಿಯುತ್ತಿದ್ದಂತೆ ನಮಗೇ ತಿಳಿಯದಂತೆ ಮನಸ್ಸು ಮೌನವಾಯ್ತು. ಎರಡನೇ ಜಾಗತಿಕ ಸಮರದಲ್ಲಿ ನೊಂದು ಬೆಂದ ಭೂಮಿಯಲ್ಲಿ ನಾವು ನಿಂತಿದ್ದೆವು. ಇಲ್ಲಿಗೆ ಭೇಟಿಯಿತ್ತ ನಾವು ಮೊದಲು ಹೊರಟದ್ದು ಪರಮಾಣು ದಾಳಿಗೆ ಆಹುತಿಯಾದ ಸ್ಥಳಕ್ಕೆ. ಅಲ್ಲಿನ ಮ್ಯೂಸಿಯಂನಲ್ಲಿ ಬಾಂಬ್ ದಾಳಿಗೆ ಮುಂಚಿನ ಹಿರೋಷಿಮಾ, ದಾಳಿ ನಡೆದ ಜಾಗಗಳು, ದಾಳಿಗೆ ತುತ್ತಾದವರ ನೋವು– ಆಕ್ರಂದನದ ಚಿತ್ರಣಗಳು ಕಂಡುಬಂದವು.

ಪ್ರಕೃತಿಯ ಆಹ್ಲಾದತೆ, ಪ್ರಕೃತಿ ನಿರ್ಮಿತ ಸೌಂದರ್ಯ ಸಹಜತೆಯನ್ನು ಸವಿಯುವುದರೊಂದಿಗೆ, ಮಾನವ ನಿರ್ಮಿತ 'ಟೋಕಿಯೊ ಸ್ಕೈ ಟ್ರೀ ಅಬ್ಸರ್ವೇಷನ್ ಡೆಕ್'ನಿಂದ ಟೋಕಿಯೊ ನಗರದ ಸೌಂದರ್ಯ ಕಂಡೆವು. 'ಸಮೀರಾ' ಎಂಬ ಪ್ರದೇಶದಲ್ಲಿರುವ ಅತ್ಯಂತ ಎತ್ತರದ ರಚನೆ ಇದಾಗಿದ್ದು, ಅಲ್ಲಿಂದ ಇಡೀ ಟೋಕಿಯೋ ನಗರ ಝಗಮಗಿಸುವುದನ್ನು ಕಾಣಬಹುದು.

ಪ್ರವಾಸದ ಕೊನೆಯ ದಿನ, ಒಸಾಕಾದಲ್ಲಿನ ನಾರಾ ಪಾರ್ಕ್‌ನಲ್ಲಿ ಬುದ್ಧನ ಅತ್ಯಂತ ದೊಡ್ಡ ವಿಗ್ರಹವುಳ್ಳ ದೇವಸ್ಥಾನಕ್ಕೆ ಭೇಟಿ ನೀಡಿದೆವು. ಇದು ಪ್ರಾಚೀನ ನಾರಾ ನಗರದ ಐತಿಹಾಸಿಕ ಸ್ಥಳಗಳಲ್ಲಿ ಒಂದು. 16 ಮೀಟರ್, 52 ಅಡಿ ಎತ್ತರದ ಈ ಪ್ರತಿಮೆಯನ್ನು ನಿರ್ಮಿಸಲು 3 ವರ್ಷಗಳಾಯಿತಂತೆ. ಈ ದೇವಸ್ಥಾನದ ವಾಸ್ತುಶಿಲ್ಪವೂ ಮನಮೋಹಕವಾಗಿದೆ.

ಪ್ರವಾಸದ ಕೊನೆಯ ದಿನ ಸಕುರಾ ಹೂವುಗಳ ನಡುವೆ ನಗುತ್ತಾ ನಿಂತಿದ್ದ ಜಪಾನಿಗೆ 'ಸಯೋನಾರಾ ಸಯೋನಾರಾ' ಹೇಳಿ ಬೀಳ್ಕೊಂಡೆವು.

ಪ್ರತಿಕ್ರಿಯಿಸಿ: feedback@sudha.co.in


